
# ದೇವರಲ್ಲಿ ನೆಲೆಗೊಳ್ಳುವಿಕೆ




ಯೇಸುವಿನ ಅನುಯಾಯಿಗಳಾಗಿರುವಂತೆಯೇ, ಆತನಿಲ್ಲದೇ ನಾವು ಏನನ್ನೂ ಮಾಡಲು ಅಸಾಧ್ಯ. ದೇವರ ರಾಜ್ಯದ ಅಭಿವೃದ್ಧಿ ಮತ್ತು ಪರಿಣಾಮಕಾರಿಯಾಗಿ ಶಿಷ್ಯರನ್ನಾಗಿಸಲು ನಾವು ಸತತವಾಗಿ ದೇವರಲ್ಲಿ ಮತ್ತು ಆತನ ಪ್ರೀತಿಯಲ್ಲಿ ನೆಲೆಗೊಂಡಿರಬೇಕು.

# ಯೇಸುವಿನಲ್ಲಿ ನೆಲೆಗೊಂಡಿದ್ದರೆ ಮಾತ್ರವೇ ಫಲಕೊಡಲು ಸಾಧ್ಯ.

ಯೋಹಾನ 15:1–11:


ನಾನೇ ನಿಜವಾದ ದ್ರಾಕ್ಷೇಬಳ್ಳಿ, ನನ್ನ ತಂದೆ ತೋಟಗಾರನು ನನ್ನಲ್ಲಿದ್ದು ಫಲಕೊಡದಿರುವ ಕೊಂಬೆಯನ್ನು ಆತನು ತೆಗೆದುಹಾಕುತ್ತಾನೆ; ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ. ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ. ನೀವು ನನ್ನಲ್ಲಿ ನೆಲೆಗೊಂಡಿರ್ರಿ, ನಾನು ನಿಮ್ಮಲ್ಲಿಯೂ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ. ನಾನು ದ್ರಾಕ್ಷೇಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ. ಯಾವನು ನನ್ನಲ್ಲಿ ನೆಲೆಗೊಂಡಿರುವುದಿಲ್ಲವೋ ಅವನು ಆ ಕೊಂಬೆಯ ಹಾಗೆ ಹೊರಗೆ ಬೀಸಾಡಲ್ಪಟ್ಟು ಒಣಗಿ ಹೋಗುವನು; ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ, ಅವು ಸುಟ್ಟು ಹೋಗುತ್ತವೆ. ನೀವು ನನ್ನಲ್ಲಿಯೂ ನನ್ನ ವಾಕ್ಯಗಳು

ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವುದು. ನೀವು ಬಹಳ ಫಲ ಕೊಡುವುದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವು ದು; ಮತ್ತು ನೀವು ನನ್ನ ಶಿಷ್ಯರಾಗುವಿರಿ. ತಂದೆ ನನ್ನನ್ನು ಪ್ರೀತಿಸಿದ ಹಾಗೆಯೇ ನಾನೂ ನಿಮ್ಮನ್ನು ಪ್ರೀತಿಸಿದ್ದೇನೆ; ನನ್ನ ಪ್ರೀತಿಯಲ್ಲಿ ನೆಲೆಗೊಂಡಿರ್ರಿ. ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿ ರುವ ಮೇರೆಗೆ ನೀವು ನನ್ನ ಆಜ್ಞೆಗಳನ್ನು ಕೈಕೊಂಡುನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ. ನನ್ನಲ್ಲಿರುವ ಆನಂದವು ನಿಮ್ಮಲ್ಲಿಯೂ ಇರಬೇಕೆಂತಲೂ ನಿಮ್ಮ ಆನಂದವು ಪರಿಪೂರ್ಣವಾಗಬೇಕೆಂತಲೂ ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ.

ನಿಜವಾದ ದ್ರಾಕ್ಷೇಬಳ್ಳಿಯಾಗಿರುವ ಯೇಸುವಿನಲ್ಲಿ ನಾವು ನೆಲೆಗೊಳ್ಳದ ಹೊರತು, ಫಲ ಕೊಡಲು ಸಾಧ್ಯವಿಲ್ಲ. ನಾವು ಪ್ರತಿಯೊಬ್ಬರೂ ಯೇಸುವಿನಲ್ಲಿ, ಮತ್ತು ಆತನು ನಮ್ಮಲ್ಲಿ ನೆಲೆಗೊಂಡಿರದ ಹೋದರೆ ದೇವರ ರಾಜ್ಯದ ಅಭಿವೃದ್ಧಿಯನ್ನು ನೋಡಲಾಗುವುದಿಲ್ಲ ಮತ್ತು ಪರಿಣಾಮಕಾರಿಯಾಗಿ ಶಿಷ್ಯರನ್ನಾಗಿ ಮಾಡಲೂ ಸಾಧ್ಯವಿಲ್ಲ. ಆದರೆ ಯಾರು ಯೇಸುವಿನಲ್ಲಿ ಮತ್ತು ಯೇಸುವು ಅವರಲ್ಲಿ ನೆಲೆಗೊಂಡಿರುತ್ತಾರೋ ಅಂಥವರು ಹೆಚ್ಚಿಗೆ ಫಲಗಳನ್ನು

ಕೊಡುವರು. ನಾವು ದೇವರಲ್ಲಿ ನೆಲೆಗೊಂಡಿದ್ದರೆ ಆತನು ನಮಗೆ ಫಲಕೊಡಲು ಸಹಾಯ ಮಾಡುತ್ತಾನೆ.

## ದೇವರೊಂದಿಗೆ ಅನ್ಯೋನ್ಯತೆಹೊಂದಲು ನಾವು ಬೆಳಕಿನಲ್ಲಿ ನಡೆಯಬೇಕು.



1 ಯೋಹಾನ 1:5–10:

ನಾವು ಆತನಿಂದ ಕೇಳಿ ನಿಮಗೆ ತಿಳಿಸುವ ವಾರ್ತೆ ಯಾವದೆಂದರೆ ದೇವರು ಬೆಳಕಾಗಿದ್ದಾನೆ; ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆ ಇಲ್ಲ ಎಂಬದೇ. ನಾವು ದೇವರ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವ ವರಾಗಿದ್ಧೇವೆ. ಸತ್ಯವನ್ನನುಸರಿಸುವವರಲ್ಲ. ಆದರೆ ಆತನು ಬೆಳಕಿನಲ್ಲಿರುವಂತೆಯೇ ನಾವು ಬೆಳಕಿನಲ್ಲಿ ನಡೆದರೆ ನಾವು ಒಬ್ಬರ ಸಂಗಡಲೊಬ್ಬರು ಅನ್ಯೋನ್ಯತೆಯಲ್ಲಿದ್ದೇವೆ. ಮತ್ತು ಆತನ ಮಗನಾದ ಯೇಸುವಿನ ರಕ್ತವು ಸಕಲಪಾಪವನ್ನು ನಿವಾರಣೆಮಾಡಿ ನಮ್ಮನ್ನು ಶುದ್ಧಿಮಾಡುತ್ತದೆ. ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ. ಮತ್ತು ಸತ್ಯವೆಂಬುದು ನಮ್ಮಲ್ಲಿಲ್ಲ. ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ

ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಲ್ಪಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು. ನಾವು ಪಾಪಮಾಡಿಲ್ಲವೆಂದು ಹೇಳಿದರೆ ಆತನನ್ನು ಸುಳ್ಳುಗಾರನನ್ನಾಗಿ ಮಾಡುತ್ತೇವೆ ಮತ್ತು ಆತನ ವಾಕ್ಯವು ನಮ್ಮಲ್ಲಿ ಇಲ್ಲ.

ದೇವರು ಮತ್ತು ಆತನ ಮಗನಾಗಿರುವ ಯೇಸು ಕ್ರಿಸ್ತನಲ್ಲಿ ಅನ್ಯೋನ್ಯತೆಯನ್ನು ಹೊಂದಲು ನಾವು ಬೆಳಕಿನಲ್ಲಿ ನಡೆಯಬೇಕು. ಬೆಳಕಿನಲ್ಲಿ ನಡೆಯುವುದು ಅಂದರೆ ನಾವು ಪಾಪವೇ ಮಾಡಿಲ್ಲ ಎಂಬದಾಗಿ ಅಲ್ಲ ಆದರೆ ಪಾಪಗಳನ್ನು ಅರಿಕೆ ಮಾಡಿ ಅವುಗಳನ್ನು ಅನುಸರಿಸದಿರುವುದೇ ಆಗಿದೆ. ಪಾಪ ಮಾಡಿದ ನಂತರ ಅದನ್ನು ಬೆಳಕಿಗೆ ತಂದು ಅರಿಕೆ ಮಾಡಿ ಯೇಸು ಕ್ರಿಸ್ತನಲ್ಲಿ ಕ್ಷಮಾಪಣೆ ಹೊಂದಿಕೊಳ್ಳುತ್ತೇವೆ. ನಾವು ದೇವರನ್ನು ಮತ್ತು ಇತರರನ್ನು ಪ್ರೀತಿಸಲು ವಿಫಲವಾದಾಗ ಬೆಳಕಿನಲ್ಲಿ ನಡೆಯುವುದು ಪ್ರೀತಿ ಮತ್ತು ತಪ್ಪೊಪ್ಪುಗೆಯ ಜೀವನ. ದೇವರ ಫಲವನ್ನು ಕೊಡಲು ಪರಿಣಾಮಕಾರಿಯಾಗಿರಲು ನಾವು ಬೆಳಕಿನಲ್ಲಿ ನಡೆಯಬೇಕು.


## ನಾವು ದೇವರಲ್ಲಿ ಹೇಗೆ ನೆಲೆಗೊಳ್ಳಬಹುದು?



ಯೋಹಾನ 15:1–11 ಮತ್ತು 1 ಯೋಹಾನ 1:5–10 ಈ ವಾಕ್ಯಭಾಗಗಳ ಮೂಲಕ ದೇವರಲ್ಲಿ ನೆಲೆಗೊಂಡು, ಆತನೊಂದಿಗೆ ಅನ್ಯೋನ್ಯತೆ ಹೊಂದುವ ಮಾರ್ಗಗಳನ್ನು ನೋಡಬಹುದು. ಅವುಗಳನ್ನು ಈ ರೀತಿಯಾಗಿ ವಿವರಿಸಬಹುದು:



**ದೇವರ ವಾಕ್ಯವು ನಮ್ಮಲಿ ನೆಲೆಸಿರಲಿ**



**ಪ್ರಾರ್ಥನೆಯ ಮೂಲಕ ಎಲ್ಲಾ ವಿಷಯಗಳನ್ನು ಕೇಳಿಕೊಳ್ಳೋಣ**



**ಯೇಸುವಿನ ಪ್ರೀತಿಯಲಿ ನೆಲೆಗೊಂಡಿರೋಣ**



**ದೇವರ ಆಜ್ಞೆಗಳನ್ನು ಕೈಗೊಳ್ಳೋಣ**

# ಪಾಪವನ್ನು ಅರಿಕೆ ಮಾಡಿ ಬೆಳಕಿನಲ್ಲಿ ನಡೆಯೋಣ

ಈ ಮೇಲಿನ ಐದು ಕ್ರಿಯೆಗಳು, ನಾವು ದೇವರಲ್ಲಿ ನೆಲೆಸಲು ಮತ್ತು ಆತನೊಂದಿಗೆ ಅನ್ಯೋನ್ಯತೆಯನ್ನು ಹೊಂದಲು ಬಯಸುವ ಮಾರ್ಗಗಳಾಗಿವೆ. ಒಂದು ಕ್ರಿಯೆಯಂದರೆ, ದೇವರ ವಾಕ್ಯವನ್ನು ಓದುವುದು, ಧ್ಯಾನಿಸುವುದು, ಕಂಠಪಾಠ ಮಾಡುವುದು ಮತ್ತು ಇತರರೊಂದಿಗೆ ಹಂಚಿಕೊಳ್ಳುವುದು ಇದರಿಂದ ಅದು ನಮ್ಮಲ್ಲಿ ಉಳಿಯುತ್ತದೆ. ಮತ್ತೊಂದು ಕ್ರಿಯೆ ಪ್ರಾರ್ಥನೆ, ದೇವರೊಂದಿಗೆ ಆಗಾಗ್ಗೆ ಸಂವಹನೆ ಮಾಡುವುದು. ನಾವು ಯೇಸುವಿನ ಸತ್ಯದಲ್ಲಿ ಬದ್ಧರಾಗಿರಬೇಕು, ಆತನು ನಮ್ಮನ್ನು ಪ್ರೀತಿಸುತ್ತಾನೆ ಎಂಬ ಸತ್ಯದಲ್ಲಿ ನೆಲೆಸಬೇಕು. ದೇವರು ಮತ್ತು ಇತರರ ಮೇಲಿನ ಪ್ರೀತಿಯ ಹೃದಯದಿಂದ, ನಾವು ದೇವರ ಆಜ್ಞೆಗಳನ್ನೂ ಸಹ ಪಾಲಿಸಬೇಕು.ಮತ್ತು ನಾವು ಪಾಪ ಮಾಡಿದಾಗ, ನಾವು ನಮ್ಮ ಪಾಪವನ್ನು ಒಪ್ಪಿಕೊಳ್ಳುತ್ತೇವೆ ಮತ್ತು ಪ್ರೀತಿಯಲ್ಲಿ ನಡೆಯುತ್ತೇವೆ.

ನಾವು ನಿರಂತರವಾಗಿ ದೇವರಲ್ಲಿ ನೆಲೆಸಿದ್ದರೆ ಮತ್ತು ಆತನೊಂದಿಗೆ ಅನ್ಯೋನ್ಯತೆಯನ್ನು ಹೊಂದಿದ್ದರೆ, ನಾವು ಹೆಚ್ಚು ಫಲವನ್ನು ಕೊಡುತ್ತೇವೆ. ನಾವು ದೇವರಲ್ಲಿ ನೆಲೆಸಿದ್ದರೆ ಮಾತ್ರವೇ ಶಿಶ್ಯರನ್ನಾಗಿ ಮಾಡುವಲ್ಲಿ ಮತ್ತು ದೇವರ ರಾಜ್ಯವು ಬೆಳೆಯುವುದನ್ನು ನೋಡುವಲ್ಲಿ ಪರಿಣಾಮಕಾರಿಯಾಗುತ್ತದೆ.

**ದೇವರ ರಾಜ್ಯದ ಬೆಳವಣಿಗೆಗೆ**

© 2023 ದೇವರ ರಾಜ್ಯದ ಬೆಳವಣಿಗೆಗೆ
ದೇವರ ರಾಜ್ಯದ ಬೆಳವಣಿಗೆಗೆ ಹೆಚ್ಚಿನ ವಿಷಯಗಳಿಗಾಗಿ,
ಭೇಟಿ ನೀಡಿ: **www.forkingdomgrowth.com**

Scripture quotations are from The Holy Bible, BSI - Kannada - J.V. published by The Bible Society of India. Used by permission.
All rights reserved.

ರಾಜ್ಯದ ಬೆಳವಣಿಗೆಗೆ ಈ ವಸ್ತುಸಂಗ್ರಹಕ್ಕೆ ಕೊಡುಗೆ ನೀಡಿದ ಎಲ್ಲರಿಗೂ ತುಂಬಾ ಧನ್ಯವಾದಗಳು. ಕರ್ತನಲ್ಲಿ ನಿಮ್ಮ ಸೇವೆ ಎಂದಿಗೂ ವ್ಯರ್ಥವಾಗುವುದಿಲ್ಲ.